ದಿನಾಂಕ 02-06-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ನಾನು ವಾದಿಗಳ ಜಿ.ಪಿ.ಎ. ಹೋಲ್ಡರ್ ಆಗಿದ್ದು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

| | |
|---|---|
| ನಿಪಿ-1 | ವಾದಿಗಳು ಬರೆದುಕೊಟ್ಟಿರುವ ಜಿ.ಪಿ.ಎ. |
| ನಿಪಿ-2 | ದಿನಾಂಕ 11.02.2015ರ ಕ್ರಯಪತ್ರದ ಮೂಲ ಪ್ರತಿ |
| ನಿಪಿ-3 | ದಿನಾಂಕ 16.03.1981ರ ಕ್ರಯಪತ್ರದ ಮೂಲ ಪ್ರತಿ |
| ನಿಪಿ-4 | ನನ್ನ ಚಿಕ್ಕಪ್ಪ ಎಂ.ವೈ.ಷರೀಫ್‌ರವರ ಮರಣ ಪ್ರಮಾಣಪತ್ರ |
| ನಿಪಿ-5 | ವಂಶವೃಕ್ಷ |
| ನಿಪಿ-6 | ಖಾತಾ ದಾಖಲೆ |
| ನಿಪಿ-7 | ಕಂದಾಯ ರಶೀದಿ |
| ನಿಪಿ-8 | ದಿನಾಂಕ 30.06.1978ರ ಕ್ರಯಪತ್ರದ ದೃಢೀಕೃತ ನಕಲು |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-8 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.